ಸಹಕಾರಸಂಘಗಳು ಮೂಲೆಗೆ ಹೋಗುತ್ತವೆ. ಅದಕ್ಕಾಗಿ ಏನಾದರೂ ಯೋಚನೆ ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ಕಮಿಟಿ ರಿಪೋರ್ಟನ್ನು ಬೇಗ ಜಾರಿಗೆ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸಮಿತಿಯ ರಿಪೋರ್ಟನ್ನು ಜಾರಿಗೆ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದ್ದಾಗ ಸಹಕಾರಸಂಘಗಳ ನೌಕರರ ಒಕ್ಕೂಟದವರು ಹೈಕೋರ್ಟ್‌ನಿಂದ ಸ್ಟೇ ತಂದರು. ಮುಂದಿನ ಅಲೋಚನೆ ಮಾಡುವುದಕ್ಕೆ ಆಗದೆ ಅಲ್ಲಿಗೆ ನಿಂತಿದೆ. ಮುಂದೆ ಏನು ಮಾಡಬೇಕೆಂದು ಸರ್ಕಾರವೇನೂ ಅಲೋಚನೆ ಮಾಡದೆ ಇಲ್ಲ. ಸಹಕಾರಕ್ಷೇತ್ರ ಅನೇಕ ಕ್ಷೇತ್ರಗಳಲ್ಲಿ ರೈತರಿಗೆ ಸಹಾಯವಾಗತಕ್ಕ ರೀತಿಯಲ್ಲಿ ಮನೆ ಕಟ್ಟುವುದಕ್ಕೆ ಆಗಬಹುದು, ವ್ಯವಸಾಯ ಅಭಿವೃದ್ಧಿಯಾಗಬಹುದು. ಈ ರೀತಿ ರೈತನಿಗೆ ಸಹಾಯ ಮಾಡುವುದಕ್ಕೆ ನಾನಾ ವಿಧವಾದ ಕಾರ್ಯಕ್ರಮಗಳು ಈ ಸಹಕಾರಸಂಘಗಳ ಮುಖಾಂತರ ನಡೆಯಬೇಕಾಗಿರುವುದರಿಂದ ನಿರ್ದಿಷ್ಟವಾಗಿ ಸಲಹೆ ಕೊಡುವುದಕ್ಕೆ ಕಷ್ಟ. ಅಜ್ಜಿಬಾಳ ಹೆಗಡೆಯವರು ತಮ್ಮ ವರದಿಯಲ್ಲಿ ವಿವರವಾಗಿ ತಿಳಿಸಿದ್ದಾರೆ. ಕಾರ್ಯದರ್ಶಿಗಳಿಗೆ ಎಷ್ಟು ಸಂಬಳ ಕೊಡಬೇಕು, ಅವರ ಸಹಾಯಕರಿಗೆ ಎಷ್ಟು ಕೊಡಬೇಕು, ದ್ವಿತೀಯದರ್ಜೆ ಗುಮಾಸ್ತರಿಗೆ ಎಷ್ಟು ಕೊಡಬೇಕು, ಮಾರಾಟಗಾರರಿಗೆ ಎಷ್ಟು ಕೊಡಬೇಕು, ಅಟೆಂಡರ್‌ಗೆ ಎಷ್ಟಿರಬೇಕು, ನಾನಾ ಹಂತದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಯಾವರೀತಿ ಸಂಬಳ ಕೊಡಬೇಕೆಂದು ವಿವರವಾದ ವರದಿಯನ್ನು ಕೊಟ್ಟಿದ್ದಾರೆ. ಆದರೆ ಸಹಕಾರ ಸಂಘಗಳ ನೌಕರರೆಲ್ಲರೂ ಸೇರಿ ಹೈಕೋರ್ಟ್‌ನಲ್ಲಿ ಸ್ಟೇ ತಂದಿರುವುದರಿಂದ ಅದನ್ನು ಜಾರಿಗೆ ಕೊಡಲಿಲ್ಲ. ಮುಂದೇನು ಮಾಡಬೇಕೆಂದು ಅಲೋಚನೆ ಮಾಡುವ ಪರಿಸ್ಥಿತಿಯಲ್ಲಿ ಸರ್ಕಾರ ಇದೆ.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಭೂಮಿಯನ್ನು ಬಿಡುಗಡೆ ಮಾಡುವುದು

29 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಜಿ.ವಿ.ಕೆ.ರಾವ್ ವರದಿಯ ಮೇಲೆ ತಡೆಹಿಡಿಯಲಾಗಿದ್ದ ಸುಮಾರು 8000 ಎಕರೆ ಭೂಮಿಯನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಸಹಕಾರ ಸಂಘಗಳಿಗೆ ಎಷ್ಟು ಭೂಮಿಯನ್ನು ಅವುಗಳ ಸ್ವಾಧೀನಕ್ಕೆ ಕೊಡಲಾಗಿದೆ, ಉಳಿದವುಗಳಿಗೆ ಭೂಸ್ವಾಧೀನ ಕೊಡದಿರಲು ಕಾರಣಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಸರ್ಕಾರ ಇದುವರೆಗೆ 33 ಗೃಹನಿರ್ಮಾಣ ಸಹಕಾರ ಸಂಘಗಳಿಗೆ 2097.19 ಎಕರೆ ವಿಸ್ತೀರ್ಣದ ಜಮೀನನ್ನು ಹಸ್ತಾಂತರಿಸಿರುತ್ತದೆ.

ಆ) ಇದೂವರೆಗೂ 33 ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಒಟ್ಟು 2097 ಎಕರೆ 19 ಗುಂಟೆ ಜಮೀನನ್ನು ಹಸ್ತಾಂತರಿಸಲಾಗಿದೆ. ಈ ಸಂಘಗಳ ಹಾಗೂ ಅದರ ಸದಸ್ಯರ ನೈಜತೆ ಮತ್ತು ಅವುಗಳು ನಿರ್ಮಿಸಿರತಕ್ಕ ಬಡಾವಣೆಗಳ ಬಗ್ಗೆ ಪರಿಶೀಲನೆ ನಡೆಯುತ್ತಿದ್ದು ಅವುಗಳು ಪೂರ್ಣಗೊಂಡ ನಂತರ ಉಳಿದ ಸಂಘಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಮಾಡುವ ಭೂಮಿ ಹಸ್ತಾಂತರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಸರ್ಕಾರದವರು ಇದುವರೆಗೆ 33 ಗೃಹನಿರ್ಮಾಣ ಸಹಕಾರಸಂಘಗಳಿಗೆ 2097.19 ಗುಂಟೆ ಎಕರೆ ವಿಸ್ತೀರ್ಣದ ಜಮೀನನ್ನು ಹಸ್ತಾಂತರ ಮಾಡಿದ್ದೇವೆ ಉಳಿದವರಿಗೆ ಪರಿಶೀಲನೆ

ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಜಿ.ವಿ.ಕೆ. ರಾವ್ ವರದಿ ಪ್ರಕಾರ ಸಹಕಾರಸಂಘಗಳು ಎಷ್ಟಿವೆ? 33ಗೃಹನಿರ್ಮಾಣ ಸಹಕಾರಸಂಘಗಳಿಗೆ ಕೊಟ್ಟು ಉಳಿದಿರುವ ಸಹಕಾರಸಂಘಗಳಿಗೆ ಭೂಮಿಯನ್ನು ಹಸ್ತಾಂತರ ಮಾಡುವುದಕ್ಕೆ ಇರತಕ್ಕ ಅಡ್ಡಿಯೇನು? ಜಿ.ವಿ.ಕೆ. ರಾವ್ ವರದಿ ಬಂದು ಎಷ್ಟು ವರ್ಷಗಳಾಗಿವೆ ಬೆಂಗಳೂರಿನಲ್ಲಿ ಸೈಟಿನ ಬೆಲೆ ಜಾಸ್ತಿಯಾಗಲಿಲ್ಲವೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಗೃಹನಿರ್ಮಾಣ ಸಹಕಾರಸಂಘಗಳು 418 ಇವೆ. ಅವುಗಳಲ್ಲಿ ಎಲ್ಲೆಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಜಮೀನು ಸಿಕ್ಕಿದೆ ಆ ವಿವರವನ್ನು ಕೊಡಬಹುದು. ಆದರೆ ಈ ಗೃಹನಿರ್ಮಾಣ ಸಹಕಾರಸಂಘಗಳ ಬಗ್ಗೆ ಕ್ರಮ ಕೈಗೊಂಡು 2097.19 ಎಕರೆ ವಿಸ್ತೀರ್ಣ ಜಮೀನನ್ನು ಇಲ್ಲಿಯವರೆಗೆ ಹಸ್ತಾಂತರಿಸಲಾಗಿದೆ. ಉಳಿದ ಸಹಕಾರ ಸಂಘಗಳ ವಿಷಯದಲ್ಲಿ ಪರಿಶೀಲನೆ ಮಾಡಿ ವಿವರವಾದ ಒಂದು ವರದಿಯನ್ನು ಕೊಡಬೇಕಾಗಿದೆ. ಆ ವರದಿಯನ್ನು ತೆಗೆದುಕೊಂಡು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ವಿಪ್ರಾಡು ಮಾಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ಬರಲಿಲ್ಲ. 33 ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ 2097-19 ಎಕರೆ ಜಮೀನು ಕೊಟ್ಟಿದ್ದಾರೆ. ಇನ್ನು ಎಷ್ಟು ಸಹಕಾರಸಂಘಗಳು ಇವೆ? ಎಷ್ಟು ಭೂಮಿಯನ್ನು ಕೊಡಬೇಕು? ಜಿ.ವಿ.ಕೆ. ರಾವ್‌ರವರ ವರದಿ ಬಂದು ಎಷ್ಟು ಕಾಲವಾಯಿತು?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣವಾದ ವಿವರ ನನ್ನ ಹತ್ತಿರ ಇಲ್ಲ. ಇದಕ್ಕೆ ಬೇಕಾದಂಥ ವಿವರಗಳನ್ನು ಒದಗಿಸಲು ನನಗೆ ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ಒದಗಿಸಿ ಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆ.

ಸಿ.ಸಿ.ಐ.ರವರಿಂದ ರಾಜ್ಯದಲ್ಲಿ ಹತ್ತಿಯ ಖರೀದಿ

301 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸಿ.ಸಿ.ಐ.ರವರು 1993-94ನೇ ಸಾಲಿನಲ್ಲಿ ಯಾವ ಯಾವ ಎ.ಪಿ.ಎಂ.ಸಿ.ಯಲ್ಲಿ ಎಷ್ಟೆಷ್ಟು ಹತ್ತಿಯನ್ನು ಖರೀದಿ ಮಾಡಿರುವರು?

ಆ) ಸಿ.ಸಿ.ಐ.ರವರು ಕರ್ನಾಟಕದಲ್ಲಿ ಅತಿ ಕಡಿಮೆ ಹತ್ತಿಯನ್ನು ಖರೀದಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹೆಚ್ಚಿನ ಹತ್ತಿಯನ್ನು ಖರೀದಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಈ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಎಪಿಎಂಸಿ ಗಳಲ್ಲಿ ಎಷ್ಟು ಹತ್ತಿ ಬಂದಿತ್ತು ಹಾಗೂ ಎಷ್ಟು ಹತ್ತಿ ಖರೀದಿ ಮಾಡಲಾಗಿದೆ?

ಉ) ಸಿಸಿಐನವರು ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಹೆಚ್ಚಿಗೆ ಹತ್ತಿಯನ್ನು ಖರೀದಿ ಮಾಡದೆ ಇರುವುದರಿಂದ ರೈತರಿಗೆ ತುಂಬಾ ಹಾನಿಯಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ 1994-95ನೇ ಸಾಲಿನಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಮಾರುಕಟ್ಟೆಗಳಲ್ಲಿ ಹೆಚ್ಚಿಗೆ ಹತ್ತಿಯನ್ನು ಖರೀದಿಸುವ ಬಗ್ಗೆ ಸರ್ಕಾರದವರು ಪ್ರಯತ್ನಿಸುವರೆ?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ತಃಖ್ತೆ ಲಗತ್ತಿಸಿದೆ

ಆ) ಬಂದಿದೆ.